ಒತ್ತಾಯವೇನೆಂದರೆ, ಅಧಿಕಾರಿಗಳ ಮಟ್ಟದಲ್ಲಿ ಒಂದು ವರ್ಷದಿಂದ ಕೇಳುತ್ತಿದ್ದೇನೆ. ಅಧಿಕಾರಿಗಳು ಒಪ್ಪಿಕೊಂಡಿರುವುದರಿಂದ ಇನ್ನು 15 ದಿವಸದೊಳಗೆ ಎರಡು dialyses machine ಗಳನ್ನು ಬೀಳಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಪೂರೈಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಯು.ಟಿ. ಖಾದರ್:– ಮಾನ್ಯ ಸದಸ್ಯರು dialyses machine ಗಳನ್ನು ಕೇಳಿದ್ದಾರೆ ಒಂದು ತಿಂಗಳೊಳಗೆ ಅವುಗಳನ್ನು ಮುಟ್ಟಿಸುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಬರೀ ಬೀಳಗಿ ಮತಕ್ಷೇತ್ರಕ್ಕೆ ಅಷ್ಟೇ ಅಲ್ಲ, ಅದಕ್ಕಿಂತ ನಮ್ಮದು ಮುಧೋಳ ದೊಡ್ಡ ಊರು, ಅದಕ್ಕೂ dialyses machine ಗಳನ್ನು ಕೊಡಿ. ನಮ್ಮ ಕಡೆಯೂ ಬಡವರು ಇದ್ದಾರೆ ಸರ್ಕಾರಿ ಆಸ್ಪತ್ರೆಗೆ ಕೊಡಿ.

ಶ್ರೀ ಯು.ಟಿ. ಖಾದರ್:– ಅವರಿಗೆ ಕೊಟ್ಟ ನಂತರ next ನಿಮ್ಮ ಕಡೆಗೆ ಬರುತ್ತದೆ.

ಉಪಾಧ್ಯಕ್ಷರು:– ಆಯಿತು.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಂಜೂರಾತಿ

120(915); ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)

ಅ) ರಾಜ್ಯದಲ್ಲಿ ದೆಹಲಿಯ ಎಮ್ಸ್ (AIMS) ಮಾದರಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಉತ್ತರ ಕರ್ನಾಟಕದ ವಿಜಯಪುರದಲ್ಲಿ ಹಾಗೂ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಎಮ್ಸ್ ಮಾದರಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಈ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ;

ಈ) ರಾಜ್ಯದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ದೆಹಲಿಯ ಎಮ್ಸ್ ಮಾದರಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮಂಜೂರು ಮಾಡಲಾಗುವುದು ಇದರ ರೂಪರೇಷಗಳೇನು;

ಊ) ಹಾಗಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು; ಈ ಬಗ್ಗೆ ಸರ್ಕಾರದ ನಿಲುವೇನು?

ಡಾ॥ ಶರಣ ಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ಹೌದು.

ಆ) ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರದ ಪ್ರಸ್ತಾವನೆಗೆ ರಾಜ್ಯ ಸರ್ಕಾರವು ಅನುಮೋದನೆಯನ್ನು ತಿಳಿಸಿದೆ. ರಾಜ್ಯ ಸರ್ಕಾರವು 04 ಸ್ಥಳಗಳನ್ನು ಗುರುತಿಸಿದ್ದು, ಕೇಂದ್ರ ಸರ್ಕಾರವು ಈ ಬಗ್ಗೆ ಸ್ಥಳವನ್ನು ನಿರ್ಣಯಿಸಬೇಕಾಗಿರುತ್ತದೆ.

ಇ) ಈ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಗಣನೆಯಲ್ಲಿದೆ. ಪರಿವೀಕ್ಷಣಾ ತಂಡದ ಸ್ಥಳ ಗುರುತಿಸುವುದು ನಿರೀಕ್ಷಿಸಲಾಗುತ್ತಿದೆ.

ಈ) ರಾಜ್ಯ ಸರ್ಕಾರವು 04 ಕಡೆಗಳಲ್ಲಿ ಸ್ಥಳಗಳನ್ನು ಗುರುತಿಸಿರುತ್ತದೆ.

ಉ) ಅದರಂತೆ, ರಾಜ್ಯದಲ್ಲಿ AIIMS ಮಾದರಿಯ ಸೂಪರ್ ಸ್ಪೆಷಾಲಿಟಿ ಹಾಗೂ ಬೋಧಕ ಆಸ್ಪತ್ರೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಪ್ರಾರಂಭಿಸಲು ರಾಜ್ಯದ ವಿಜಯಪುರ ಜಿಲ್ಲೆಯ ಮುಳವಾಡ್, ಧಾರವಾಡ ಜಿಲ್ಲೆಯ ಇಟಗಟ್ಟಿ ಮತ್ತು ರಾಮನಗರ ಜಿಲ್ಲೆಯ ಹಾರೋಹಳ್ಳಿ, ಜೊತೆಗೆ ಗುಲ್ಬರ್ಗಾ ನಗರದ

ಇ.ಎಸ್.ಐ ಆಸ್ಪತ್ರೆಯ ಆವರಣ ಸೇರಿ 04 ಸ್ಥಳಗಳನ್ನು ಗುರುತಿಸಲಾಗಿದೆ.

ಊ) ಕೇಂದ್ರ ಸರ್ಕಾರದ ಅನುಮೋದನೆಯ ನಂತರ, ಕೇಂದ್ರ ಸರ್ಕಾರವು ಆಸ್ಪತ್ರೆಯನ್ನು ಸ್ಥಾಪಿಸಲು ಹಂತ ಹಂತವಾಗಿ ಕ್ರಮವಹಿಸುತ್ತದೆ. ರಾಜ್ಯ ಸರ್ಕಾರವು ಭೂಮಿ, ರಸ್ತೆ ಸಂಪರ್ಕ ಮತ್ತು ನೀರು ಹಾಗೂ ವಿದ್ಯುತ್ ಸೌಲಭ್ಯಗಳನ್ನು ಈ ಯೋಜನೆಗೆ ಒದಗಿಸಲು ಕ್ರಮವಹಿಸಲಾಗುವುದು.

ಡಾ॥ ಶರಣಪ್ರಕಾಶ್ ಆರ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಆ ಪ್ರಶ್ನೆ ನನಗೆ ವರ್ಗಾವಣೆಯಾಗಿದೆ, ಅದಕ್ಕೆ ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬಗ್ಗೆ ನಾನು ಪ್ರಶ್ನೆ ಮಾಡಿದ್ದೆನು. ಉತ್ತರ ಕರ್ನಾಟಕದಲ್ಲಿ ಬಿಜಾಪುರ ಜಿಲ್ಲೆ ವಿಶೇಷವಾಗಿ ಅತ್ಯಂತ ಹಿಂದುಳಿದಿರುವಂತಹ ಜಿಲ್ಲೆಯಾಗಿದೆ. ಅಲ್ಲಿ ಬಡ ರೋಗಿಗಳಿಗೆ ಅನೇಕ ಸಮಸ್ಯೆಗಳಿವೆ. ಇವತ್ತು ಗುಲ್ಬರ್ಗಕ್ಕೆ ಹೋದರೆ ಒಂದು ಇ.ಎಸ್.ಐ. ಆಸ್ಪತ್ರೆ ಇದೆ, ಬೆಳಗಾಂಗೆ ಹೋದರೆ ಕೆ.ಎಲ್.ಇ. ಆಸ್ಪತ್ರೆ ಇದೆ. ಅಲ್ಲಿ ಜನರ ಪರಿಸ್ಥಿತಿ ಹೇಗಿದೆ ಎಂದರೆ ಮೀರಜ್, ಸೊಲ್ಲಾಪುರ, ಮತ್ತು ಹೈದಾರಾಬಾದ್ ಈ ಕಡೆಗಳಲ್ಲಿ ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಆ ಬಡ ರೋಗಿಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ, ನಾವೇನು ಬೆಳಗಾಂ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚಿಂತನೆಯನ್ನು ಮಾಡಿದ್ದೇವೆ, ಡಾ: ನಂಜುಂಡಪ್ಪ ಆಯೋಗದ ವರದಿ ಪ್ರಕಾರ ಎಲ್ಲಾ ಭಾಗಗಳು ಸಮಾನಾಂತರವಾಗಿ ಬೆಳವಣಿಗೆ ಆಗಬೇಕು ಎಂದು ಕಳಕಳಿಯನ್ನು ಹೊಂದಿದಂತಹ ಸಂದರ್ಭದಲ್ಲಿ ಈ ಆಸ್ಪತ್ರೆಯನ್ನು ಕೇಂದ್ರ ಸರ್ಕಾರದ ಮೂಲಕ All India Institute of Medical Sciences ಎಂದು hospital ಕರ್ನಾಟಕ ರಾಜ್ಯಕ್ಕೆ ಬರುತ್ತಿದೆ, ಅವುಗಳನ್ನು ನಾಲ್ಕು ಕಡೆ ಮಾಡಬೇಕೆಂದು ಗುರುತಿಸಿದ್ದೀರಿ. ನಾಲ್ಕು ಆಸ್ಪತ್ರೆಗಳಲ್ಲಿ ಬಿಜಾಪುರದಲ್ಲಿ ಕೂಡ ಒಂದು ಆಸ್ಪತ್ರೆ

ಮಾಡಬೇಕೆಂದು ಇದೆ. ಬಿಜಾಪುರಕ್ಕೆ ತಾವು ಅಗ್ರ ಪ್ರಾಶಸ್ತ್ಯವನ್ನು ಕೊಡುವುದರ ಮುಖಾಂತರ ಈ social imbalance ಏನಿದೆ, ಇದನ್ನು ಸರಿಪಡಿಸುವ ಅನೇಕ ಯೋಜನೆಗಳಲ್ಲಿ ಇದೂ ಕೂಡ ಒಂದಾಗುತ್ತದೆ. ಏಕೆಂದರೆ ಈಗಾಗಲೇ 115 ಎಕರೆ ಜಮೀನನ್ನು ಹೊಂದಿದ್ದು, civil hospital 13 ಕೋಟಿ ರೂಪಾಯಿಯಲ್ಲಿ ನವೀಕರಣಗೊಳ್ಳುತ್ತಿದೆ. ಅಲ್ಲಿ ಸಂಪೂರ್ಣವಾಗಿ terms and conditions fulfill ಮಾಡುವುದಕ್ಕೆ ಎಲ್ಲಾ ರೀತಿಯಲ್ಲೂ ಅತ್ಯಂತ ಯೋಗ್ಯವಾದ ಪ್ರದೇಶವಾಗಿದೆ. ಅದಕ್ಕಾಗಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವಂತಹ ಸಂದರ್ಭದಲ್ಲಿ ಬಿಜಾಪುರದಲ್ಲಿ ಮಾಡುವ ವಿಚಾರದಲ್ಲಿ ಬಹಳ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಶರಣ ಪ್ರಕಾಶ್ ಆರ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ All India Institute of Medical Sciences ಮಾದರಿಯಲ್ಲಿ ಯಾವುದೇ ಆಸ್ಪತ್ರೆಗಳು ಇಲ್ಲದಿರುವುದರಿಂದ ಕೇಂದ್ರ ಸರ್ಕಾರದವರು ನಮಗೆ ಒಂದು ಪ್ರಸ್ತಾವನೆಯನ್ನು ಕೇಳಿದ್ದರು. ಅದನ್ನು ನಾವು ಪರಿಶೀಲನೆ ಮಾಡಿ ನಾಲ್ಕು ಸ್ಥಳಗಳನ್ನು ಗುರುತಿಸಿದ್ದೇವೆಂದು ಉತ್ತರದಲ್ಲಿ ಹೇಳಿದ್ದು, ಅದರಲ್ಲಿ ಬಿಜಾಪುರ ಕೂಡ ಒಂದಾಗಿದೆ. ಇದರ ಬಗ್ಗೆ ಕೇಂದ್ರ ಸರ್ಕಾರ ತೀರ್ಮಾನ ಮಾಡುವುದಿದ್ದು, ಅದರ ಬಗ್ಗೆ ಉತ್ತರದಲ್ಲಿ ಮಾಹಿತಿಯನ್ನು ಕೊಟ್ಟಿದ್ದೇವೆ. ಕೇಂದ್ರ ಸರ್ಕಾರದ ಪರಿವೀಕ್ಷಣಾ ತಂಡದವರು ಬಂದು ಇಲ್ಲಿ inspection ಮಾಡಿ, ಎಲ್ಲಿ ಸೂಕ್ತ ಎಂದು ಹೇಳುತ್ತಾರೆ, ಅಲ್ಲಿ ನಾವು ಎಲ್ಲಾ ಸವಲತ್ತುಗಳನ್ನು ಒದಗಿಸಬೇಕಾಗುತ್ತದೆ. ರಾಯಚೂರು ಜಿಲ್ಲೆ ಮತ್ತು ಬೇರೆ ಬೇರೆ ಜಿಲ್ಲೆಯಿಂದ ಕೂಡ ಪ್ರಸ್ತಾವನೆ ಇದೆ. ಅದರ ಬಗ್ಗೆ ತಮ್ಮ ಗಮನಕ್ಕೆ ತರುತ್ತೇವೆ. ಕೇಂದ್ರ ಸರ್ಕಾರದ ಕಮಿಟಿ ಬಂದು ಪರಿಶೀಲನೆ ಮಾಡುತ್ತದೆ, ಅವರಿಗೆ ಎಲ್ಲಿ ಸೂಕ್ತ ಎಂದು ಅನಿಸುತ್ತದೆ, ಅಲ್ಲಿ ಆಸ್ಪತ್ರೆಯನ್ನು ಮಾಡುತ್ತಾರೆ. ಅದರಲ್ಲಿ ನಮ್ಮ ಪಾತ್ರ ಜಾಸ್ತಿಯಿಲ್ಲ. ಕೇಂದ್ರ ಸರ್ಕಾರ ಎಲ್ಲಿ ನಿರ್ಣಯ ಮಾಡುತ್ತದೆ, ಅದಕ್ಕೆ ರಾಜ್ಯ ಸರ್ಕಾರ ಎಲ್ಲಾ ಸವಲತ್ತುಗಳನ್ನು ಒದಗಿಸುವ ನಿರ್ಣಯವನ್ನು ಮಾಡುತ್ತದೆ.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ terms and conditions ಪ್ರಕಾರ ಮಾಡಬೇಕೆಂದರೂ ಕೂಡ ultimate decision ಅವರೇ ಮಾಡುವವರು. ಆದರೆ ಇವರು ಇಲ್ಲಿ ನಾಲ್ಕು ಕಡೆ ಮಾಡಬಹುದು ಎಂದು ಪ್ರಸ್ತಾವನೆ ಕಳುಹಿಸಿದ್ದಾರೆ, ಈ ನಾಲ್ಕರಲ್ಲಿ ಬಿಜಾಪುರ ಯೋಗ್ಯ ಪ್ರದೇಶ ಎನ್ನುವುದೂ ಕೂಡ ತಮ್ಮ ಮುಖಾಂತರ ಅವರ ಗಮನಕ್ಕೆ ಹೋಗಲಿ ಎನ್ನುವುದು ನನ್ನ ಉದ್ದೇಶ. ಅದರ ಬಗ್ಗೆ ಬೇರೆ ಏನೂ ಇಲ್ಲ. ನೀವು ಎಲ್ಲರನ್ನೂ ಸಮಾನವಾಗಿ ಇಟ್ಟಿದ್ದೇವೆಂದರೆ ಏನೂ ತೊಂದರೆಯಾಗುವುದಿಲ್ಲ. ಎಲ್ಲಾ ಜಿಲ್ಲೆಗಳು balance ಆಗಿ ಬೆಳೆಯಬೇಕಲ್ಲ? ಕೇವಲ ಒಂದೊಂದೇ ಪ್ರದೇಶ ಬೆಳವಣಿಗೆ ಆಗುತ್ತಾ ಹೋದರೆ ಹೇಗೆ?

ಉಪಾಧ್ಯಕ್ಷರು:– ಅಲ್ಲಿಗೆ ಆದ್ಯತೆ ಕೊಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್:– ನೀವು ಎಲ್ಲಾ ಕಡೆ ಆದ್ಯತೆ ಕೊಡಬೇಕಲ್ಲ.

ಡಾ॥ ಶರಣಪ್ರಕಾಶ್ ಆರ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಭಾಗಕ್ಕೆ ಆದ್ಯತೆ ಕೊಡುವಂತಹ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿದೆ. ನಾನು ಏಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ ನಾವು ಬಾಗಲಕೋಟೆಯಲ್ಲಿ ಕೂಡ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬಿಜಾಪುರದಲ್ಲಿ ಕೂಡ ಮಾಡಬೇಕೆನ್ನುವ ಪ್ರಸ್ತಾವನೆ ಇದ್ದು, ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. AIIMS like institute ಅಂದಾಗ ಇಡೀ ರಾಜ್ಯಕ್ಕೆ ಅನುಕೂಲವಾಗುವಂಥದ್ದಾಗಿದ್ದು, ಅದನ್ನು ನೋಡಿ ಮಾಡಬೇಕಾಗುತ್ತದೆ ಮತ್ತು ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ ಅವರ priority ಕೂಡ ಏನಿದೆ ಎಂದು ನೋಡಬೇಕಾಗುತ್ತದೆ. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಉತ್ತರ ಕರ್ನಾಟಕದಲ್ಲಿ super speciality hospital ಅವಶ್ಯಕತೆ ಇದೆ. ಅದರ ಬಗ್ಗೆ ಸರ್ಕಾರ ಖಂಡಿತವಾಗಿ ಸಕಾರಾತ್ಮಕವಾಗಿ ಪರಿಶೀಲನೆ ಮಾಡುತ್ತದೆ.